"ಮೇಡಮ್ಮೋರೆ, ನಾನು ಮಾದೇವಿ ಅಂತ. ಮುಂಚೆ ನಾನು ನಿಮ್ಮ ಆಶ್ರಮದ ಸ್ಕೂಲ್ ಬಾಜೂದಲ್ಲೇ ಬಜ್ಜಿ ಮಾರ್ತಿದ್ದೆ. ಆವಾಗ ದಿನಾ ಸಂಜಿ ನಿಮ್ಮುನ್ನ ಗೇಟಿನ್ತಾವ ನೋಡ್ತಿದ್ದೆ. ಬಜಿ ಪರಿಮಳಕ್ಕೆ ಹುಡುಗ್ರಿಗೆ ಆಸೆ ಆಗ್ತದೆ. ಇಲ್ಲಿ ಗಾಡಿ ಇಡ್ಬೇಡ ಅಂತ ನಿಮ್ಮ ಆಶ್ರಮದೋರು ನನ್ನ ಗಾಡಿ ಎತ್ತಂಗ್ಡಿ ಮಾಡ್ಸಿದ್ರಲ್ಲ. ಆಮ್ಯಾಕೆ ಈ ಬೀದಿಗೆ ಬಂದೆ. ಇಲ್ಲಿ ಮಾಲಕ್ಸ್ಮಿ ಗುಡಿ ತಾವ ಮುಂಜಾನಿ ಹೂವ ಮಾರ್ತೀನಿ." ಅವಳ ಮುಖದಲ್ಲಿ ಅಸಹನೆ ಕಾಣಲಾರಂಭಿಸಿದಾಗ ಮಾದೇವಿ ಗಾಡಿ ಬಳಿ ಇರುವ ಹುಡುಗನನ್ನು ಕರೆದಳು. ಆತ ಓಡಿ ಬಂದವನೇ ಅವಳ ಮುಖ ನೋಡುತ್ತ, "ಮೇಡಮ್ಮೋರೇ, ಹಿಂದಿನ್ತಿಂಗ್ಳ ತನ್ಕ ನಿಮ್ಮ ಅಪಾರ್ಟ್‌ಮೆಂಟಿಗೆ ಮುಂಜಾನೆ ಪೇಪರ್ ಹಾಕಿದ್ದು ನಾನೇಯ" ಅಂದ. ಈಗ ಯಾವುದೋ ಒಂದು ಪರಿಚಿತ ಎಳೆ ಇದೆ ಅನಿಸಿ ಕುತೂಹಲದಿಂದ ಇಬ್ಬರನ್ನೂ ನೋಡಿದಳು.

"ಮೇಡಮ್ಮೋರೆ, ನಿಮ್ಮಿಂದ ನಮ್ಮುಡಗನಿಗೊಂದು ಸಾಯ ಬೇಕಾತ್ರೀ" ಮಾದೇವಿ ಪಟಕ್ಕನೆ ಹೇಳಿದಳು. ಅವಳಿಗೆ ತನ್ನನ್ನ ಅಡ್ಡ ಹಾಕಿದ್ದರ ವಾಸನೆ ಹತ್ತಿತು.

"ಮೇಡಮ್ಮೋರೆ, ಈ ಹುಡುಗನ ಅಪ್ಪ ಅಮ್ಮ ಆ ಓಣಿ ಕೊನೆಯಲ್ಲಿರೋ ಶೆಡ್ಡಲ್ಲಿದ್ರು. ಇವ್ನಪ್ಪ ಅಮ್ಮ ಗಾರೆ ಕೆಲ್ಸಕ್ಕೆ ಹೋಗ್ತಿದ್ರು. ಇವ್ನಿಗೆ ಒಬ್ಳು ಅಕ್ಕ ಇದ್ಲಂತೆ. ಅವಳನ್ನ ಬೇರೆಲ್ಲೋ ಕೆಲಸಕ್ಕೆ ಬಿಟ್ಟಿದ್ರಂತೆ. ಇವ್ನಪ್ಪ ಯಂಡ್ಕುಡ್ಕ. ಹೋದ್ವಾರ ಕುಡ್ಕಂಬಂದು ಹೆಂಡ್ತಿಗೆ ಜಪ್ಪಿದ್ದಾಗ ಈ ಕೂಸು ಅವ್ವಂಗೆ ಹೊಡ್ದ್ರೆ ಕೈ ಕುಯ್ಕಂತೀನಿ ಅಂತ ಅಪ್ಪಂಗೆ ಆವಾಜ್ ಹಾಕ್ತು. ಆವಯ್ಯ ಎಣ್ತಿಗೆ ಮತ್ತೂ ಹೊಡ್ದ. ಇವ್ನು ಸಿನ್ಮಾ ಈರೋನಂಗೆ ಚಾಕು ತಗಂಡು ಕೈ ಕುಯ್ಕಂಡ. ಅಪ್ಪ ಅನಸ್ಕಂಡವ್ನು ಇವ್ನ ಮೇಲೇ ದೊಣ್ಣೆ ಬೀಸ್ದ. ತಡಿಯಾಕ ಅಡ್ಡ ನಿಂತ ಆಕಿ ತಲೆ ಮೇಲೆ ದೊಣ್ಣೆ ಬಿತ್ತು. ಅಲ್ಲೇ ಸತ್ತೋದ್ಲು. ಈ ಹುಡುಗನ್ನ ನಾವೆಲ್ಲ ಸೇರಿ ಆಸ್ಪತ್ರೆಗೆ ಒಯ್ದ್ವೋ. ಹೆಂಡ್ತಿ ಕೊಂದವ್ನ ಪೊಲೀಸ್ನೋರು ಕರ್ಕಂಡೋದ್ರು. ಈ ಹುಡುಗ ಆಸ್ಪತ್ರೆಂದ ಬಂದಾಗ ಆ ಶೆಡ್ನೊಳಗೆ ಬೇರೆಯೋರು ಸೇರ್ಕಂಡಿದ್ರಂತೆ. ಇವ್ನ ಪೇಪರ್ ಕೆಲ್ಸಕ್ಕೆ ಬ್ಯಾರೆ ಯಾರ್ನೋ ಇಟ್ಕಂಡ್ನಂತೆ ಯಜಮಾನ. ಈಗ ಇವ್ನಿಗೆ ದಿಕ್ಕಿಲ್ದಂಗಾಗಿದೆ ಅಕ್ಕೋರೆ." ಮಾದೇವಿ ಮಾತನ್ನು ತಾಳ್ಮೆಯಿಂದಲೇ ಕೇಳಿದ ಅವಳು,

"ನೀನು ಇಷ್ಟು ಗಟ್ಮುಟ್ಟಾಗಿದ್ದೀಯಲ್ಲ ಜ್ಜಿ. ಮೊಮ್ಮಗ ನಿಂಗೆ ಹೆಚ್ಚಾಗ್ತಾನಾ?" ಕೇಳಿದಳು.

"ಮೇಡಮ್ಮು, ಈ ಅಜ್ಜಿಗೆ ನಾನು ಸ್ವಂತ ಅಲ್ಲ. ಆದ್ರೂ ಅಜ್ಜಿ ಸ್ವಂತದೋನ್ ತರ ನೋಡ್ಕಂತಾರೆ."

